## ದಿನಾಂಕ: 22.01.2015 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು :

1. ಶ್ರೀ ಎ.ಕೆ.ಎಂ.ನಾಯಕ್, ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ ಟಿ.ರಾಮಾನಾಯಕ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಶೇಖರ್.ಡಿ.ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಎಲ್.ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ ಶಂಕರ್.ಆರ್.ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
6. ಶ್ರೀ ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿ
7. ಶ್ರೀಮತಿ ಶ್ರೀಲತ ಕೋಟೆಮಠ್, ಪ್ರಭಾರ ಕಾರ್ಯದರ್ಶಿ

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

### 1. ಅನುಪಾಲನಾ ವರದಿ

ಮೊದಲಿಗೆ ಈ ವಿಷಯವನ್ನು ಆಯೋಗದ ಪ್ರಭಾರ ಕಾರ್ಯದರ್ಶಿಗಳು ಪ್ರಸ್ತಾಪಿಸಿ, ಹಿಂದಿನ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ವಯ ಕ್ರಮ ವಹಿಸಲಾಗಿರುವ ಈ ಕೆಳಕಂಡ ಅನುಪಾಲನಾ ವರದಿಯನ್ನು ಸಭೆಯಲ್ಲಿ ಮಂಡಿಸಿದರು :

- ಕಳೆದ ಸಭೆಯಲ್ಲಿ ತೀರ್ಮಾನಿಸಿದಂತೆ ಗುತ್ತಿಗೆದಾರರಿಗೆ ಹೊರಗುತ್ತಿಗೆ ಅವಧಿಯನ್ನು ಮೂರು ತಿಂಗಳ ಅವಧಿಗೆ ವಿಸ್ತರಿಸಲಾಗಿರುವುದನ್ನು ತಿಳಿಸಲಾಗಿರುತ್ತದೆ.
- ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಸಿ ಆದೇಶ ನೀಡುವ ಆದೇಶದ ಪ್ರತಿಗಳ ಜೊತೆಗೆ 6(1) ಮತ್ತು 19(1)ರ ಮೇಲ್ಮನವಿ ಹಾಗೂ 19(3)ರಡಿಯಲ್ಲಿ ಅಪೀಲು ಮಾಹಿತಿಗಳನ್ನು ಫ್ರಾಂಕಿಂಗ್ ಮೂಲಕ ಕಳುಹಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು.
- ಆಯೋಗದ ಪ್ರಭಾರ ಕಾರ್ಯದರ್ಶಿಗಳು, ಕಚೇರಿ ಅಧೀಕ್ಷಕರು ಹಾಗೂ ರಾಜ್ಯ ಮಾಹಿತಿ ಆಯುಕ್ತರುಗಳಾದ ಶ್ರೀ ಎಲ್.ಕೃಷ್ಣಮೂರ್ತಿ ಹಾಗೂ ಶ್ರೀ ಶಂಕರ್ ಆರ್ ಪಾಟೀಲ್ ಅವರುಗಳ ವಾಹನ ಚಾಲಕರಿಗೆ ಮೊಬೈಲ್ ಕರೆನ್ಸಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿರುವುದಾಗಿ ಸಭೆಗೆ ತಿಳಿಸಿದರು.
- ಆಯೋಗದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ 65 ವರ್ಷಗಳಿಗಿಂತಲೂ ಹೆಚ್ಚಿನ ವಯೋಮಿತಿಯ ನೌಕರರ ಸೇವೆಯನ್ನು ಅಂತ್ಯಗೊಳಿಸುವ ಅಂಶವನ್ನು ಹೊಸದಾಗಿ ಟೆಂಡರ್ ಕರೆಯುವ ಷರತ್ತುಗಳಲ್ಲಿ ಸೇರ್ಪಡಿಸಲಾಗಿದೆ ಎಂಬ ಮಾಹಿತಿಯನ್ನು ನೀಡಿದರು.
- ಆಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾನೂನು ಸಹಾಯಕರ ವೇತನ ಹೆಚ್ಚಳದ ಬಗ್ಗೆ ಜಾಬ್‌ಚಾರ್ಟ್ ತಯಾರಿಸಲು ರಾಜ್ಯ ಉಚ್ಚನ್ಯಾಯಾಲಯದ ಲೀಗಲ್ ಅಸಿಸ್ಟೆಂಟ್ / ಲಾ-ಎನ್‌ಟ್ರೆನ್ಸ್ ಹುದ್ದೆಗಳ ಕಾರ್ಯಪಟ್ಟಿ ಪಡೆಯಲಾಗುತ್ತಿದ್ದು, ಮುಂದಿನ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿದರು.

- ಆಯೊಗದಲ್ಲಿ ಹಾಲಿ ಇರುವ ಹಳೆಯ / ಕೆಟ್ಟು ಹೋಗಿರುವ ಗಣಕಯಂತ್ರಗಳಿಗೆ ಬದಲಾಗಿ ಹೊಸ ಗಣಕಯಂತ್ರಗಳನ್ನು ಖರೀದಿಸುವ ಸಲುವಾಗಿ ಇ-ಆಡಳಿತ ಇಲಾಖೆಯೊಂದಿಗೆ ಸಂಪರ್ಕಿಸಲಾಗಿದ್ದು ಅವರ ಸಲಹೆಯಂತೆ ಬೈಬ್ಯಾಕ್ ಸ್ಕೀಮ್ ಅಡಿಯಲ್ಲಿ ಗಣಕಯಂತ್ರಗಳನ್ನು ಖರೀದಿಸಲು ಹೊಸದಾಗಿ ದರಪಟ್ಟಿಯನ್ನು ಹಾಗೂ ಮಾಹಿತಿಯನ್ನು ಮಾರಾಟಗಾರರಿಂದ ಪಡೆಯಲು ಪತ್ರ ಬರೆಯಲಾಗಿರುವುದಾಗಿ ತಿಳಿಸಿದರು. ಮುಂದುವರೆದು, ಕರ್ನಾಟಕ ಮಾಹಿತಿ ಆಯೋಗದಲ್ಲಿರುವ ಗಣಕಯಂತ್ರಗಳ ನಿರ್ವಹಣೆಗಾಗಿ ಒಬ್ಬರು ತಜ್ಞ ಹಾರ್ಡ್‌ವೇರ್ ಇಂಜಿನಿಯರ್ ಅವರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಆಯೋಗದ ಅಭಿಪ್ರಾಯ ಕೋರಿದರು.

- ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಮಾಹಿತಿ ಆಯುಕ್ತರು, ತಜ್ಞರಿಂದ ಗಣಕಯಂತ್ರಗಳ ವಸ್ತುಸ್ಥಿತಿಯನ್ನು ಪರೀಕ್ಷಿಸಿ ತದನಂತರ ವರದಿ ನೀಡುವಂತೆ ಹಾಗೂ ಆ ಪ್ರಕಾರವಾಗಿ 'ಬೈಬ್ಯಾಕ್ ಸ್ಕೀಮ್'ನಲ್ಲಿ ಗಣಕಯಂತ್ರಗಳನ್ನು ಖರೀದಿಸುವ ಸಲುವಾಗಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು.

**2. ಆಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವೇತನಕ್ಕೆ ಸಂಬಂಧಿಸಿದಂತೆ ಹಾಗೂ ಟೆಂಡರ್ ಗುತ್ತಿಗೆದಾರರ ಸೇವಾ ಅವಧಿಯನ್ನು ವಿಸ್ತರಿಸುವ ಬಗ್ಗೆ :**

ವಿಷಯವನ್ನು ಪ್ರಸ್ತಾಪಿಸಿದ ಪ್ರಭಾರ ಕಾರ್ಯದರ್ಶಿಗಳು ಪ್ರಸ್ತುತ ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಥಮದರ್ಜೆ ಸಹಾಯಕರು ಆಯೋಗಕ್ಕೆ ಮನವಿ ಸಲ್ಲಿಸಿ ಸರ್ಕಾರದ ನಿಯಮದಂತೆ ಪ್ರಥಮದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಗಾರರಿಗೆ ಸಮಾನವೇತನ ನೀಡುವಂತೆ ಕೋರಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯಿಂದ ಕೋರಿದಾಗ, ಸರ್ಕಾರದ ಮಟ್ಟದಲ್ಲಿ ಸಹಾಯಕರು / ಪ್ರಥಮದರ್ಜೆ ಸಹಾಯಕರು / ಶೀಘ್ರಲಿಪಿಗಾರರಿಗೆ ಸಮಾನವೇತನ ನೀಡುತ್ತಿರುವುದಾಗಿ ಅಭಿಪ್ರಾಯ ನೀಡುವುದಾಗಿ ಸಭೆಗೆ ತಿಳಿಸಿದರು ಮತ್ತು ಅಂತೆಯೇ ಆಯೊಗದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 09 ಜನ ಪ್ರಥಮದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಗಾರರಿಗೆ ಸಮಾನ ವೇತನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು ಇದಕ್ಕಾಗಿ ಹೆಚ್ಚುವರಿಯಾಗಿ ಅಗತ್ಯವಿರುವ ಅನುದಾನದ ಅಂಕಿ ಅಂಶಗಳ ತಃಖ್ತೆಯನ್ನು ಸಿದ್ಧಪಡಿಸಿದ್ದು ಅದರನ್ವಯ ರೂ.74213/-ಗಳ ಹೆಚ್ಚುವರಿ ಅನುದಾನಕ್ಕೆ ಅನುಮತಿ ಕೋರಿ ಅಂಕಿ-ಅಂಶಗಳ ತಖ್ತೆಯನ್ನು ಸಭೆಯಲ್ಲಿ ಮಂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಾಹಿತಿ ಆಯುಕ್ತರು ಪ್ರಸ್ತುತ ಆಯೋಗದಲ್ಲಿ ನೀಡುತ್ತಿರುವ ವೇತನಕ್ಕೆ ಅನುಗುಣವಾಗಿಯೇ ಸಹಾಯಕರು / ಶೀಘ್ರಲಿಪಿಗಾರರ ಸಮಾನವೇತನವನ್ನು ನೀಡುವಂತೆ ಸೂಚಿಸಿದರು ಹಾಗೂ ಪ್ರಸ್ತಾವನೆಗೆ ಸಭೆ ಅನುಮೋದನೆ ನೀಡಿತು.

ಕ್ರಮ : ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ)

3. ಇತರೆ ವಿಷಯ :

- **ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಆಯೋಗಕ್ಕೆ ಸಲ್ಲಿಸುವ ವರದಿಗಳನ್ನು ಸಂಬಂಧಪಟ್ಟ ಕಡತಗಳಲ್ಲಿರಿಸುವ ಬಗ್ಗೆ:**

ವಿಷಯವನ್ನು ಪ್ರಸ್ತಾಪಿಸುತ್ತಾ ಮಾತನಾಡಿದ ರಾಜ್ಯ ಮುಖ್ಯಮಾಹಿತಿ ಆಯುಕ್ತರು ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವಾಗ ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ನೀಡುವ ಸೂಚನೆಗಳಿಗನುಗುಣವಾಗಿ ಅವರುಗಳು ಸಲ್ಲಿಸುವ ವರದಿಗಳನ್ನು ಮುಂದಿನ ವಿಚಾರಣೆ ವೇಳೆಗೆ ಸಂಬಂಧಪಟ್ಟ ಕಡತಗಳಲ್ಲಿರಿಸಿ ಮಂಡಿಸಬೇಕಾಗಿದ್ದು, ಈ ಕಾರ್ಯವನ್ನು ಸಮರ್ಪಕವಾಗಿ ವಿಷಯ ನಿರ್ವಾಹಕರು / ಸಿಬ್ಬಂದಿಗಳು ನಿರ್ವಹಿಸದೇ ಇರುವುದರಿಂದ ವಿಚಾರಣೆ ನಡೆಸಿ ಆದೇಶ ನೀಡಲು ಅಡಚಣೆಯಾಗುತ್ತಿರುವುದರಿಂದ ಇದನ್ನು ಗಂಭೀರವಾಗಿ ಪರಿಗಣಿಸಿ ಆಯೋಗದ ಸಿಬ್ಬಂದಿ ವರದಿಗಳನ್ನು ಕಾಲಕಾಲಕ್ಕೆ ಸಂಬಂಧಪಟ್ಟ ಕಡತಗಳಲ್ಲಿರಿಸಿ ವಿಚಾರಣೆ ವೇಳೆ ಮಂಡಿಸಲು ಸೂಕ್ತ ಸೂಚನೆ ನೀಡುವಂತೆ ಪ್ರಭಾರ ಕಾರ್ಯದರ್ಶಿಗಳಿಗೆ ಸೂಚಿಸಿದರು.

ಕ್ರಮ : ಕಾರ್ಯದರ್ಶಿಗಳು

- **ಆಯೋಗದ ಅಂತರ್ಜಾಲ ತಾಣದ ಸ್ಟೇಟಸ್‌ನಲ್ಲಿ ಐಪಿಓ ಸಂಖ್ಯೆಯನ್ನು ದಾಖಲಿಸುವ ಬಗ್ಗೆ:**

ವಿಷಯವನ್ನು ಪ್ರಸ್ತಾಪಿಸಿದ ಪ್ರಭಾರ ಕಾರ್ಯದರ್ಶಿಗಳು, ಆಯೋಗದ ಅಂತರ್ಜಾಲ ತಾಣದಲ್ಲಿ ಈ ಹಿಂದೆ ಪ್ರಕರಣ ಸಂಖ್ಯೆ / ಮನವಿದಾರರ ಹೆಸರಿನ ಮೂಲಕ ಸ್ಟೇಟಸ್ ತಿಳಿಯಬಹುದಾಗಿದ್ದು ಪ್ರಸ್ತುತ ಮನವಿದಾರರು 6(1)ರಡಿಯಲ್ಲಿ ಅರ್ಜಿ ಸಲ್ಲಿಸುವಾಗ ನೀಡುವ ಪೋಸ್ಟಲ್ ಆರ್ಡರ್ ಸಂಖ್ಯೆಯನ್ನು ನಮೂದಿಸಿಯೂ ಸ್ಟೇಟಸ್ ತಿಳಿಯಲು ಅನುಕೂಲವಾಗುವಂತೆ ಅಂತರ್ಜಾಲ ತಾಣವನ್ನು ಅಪ್‌ಡೇಟ್ ಮಾಡಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆಯುವ ವಿಚಾರಣೆಯ ಬಗ್ಗೆ ಮುಂದಿನ ಸಭೆಯಲ್ಲಿ ವಿಷಯ ಮಂಡಿಸುವಂತೆ ಮುಖ್ಯ ಮಾಹಿತಿ ಆಯುಕ್ತರು ತಿಳಿಸುತ್ತಾ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿರು.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು